

ರೇಣುಕಾ ರಮಾನಂದ
ಕಲೆ: ರೂಪಶ್ರೀ ಕಲ್ಲಿಗನೂರು



# ಈ ನಿಲಾವು

ಮುಗಿಯಿತು ಮಳೆಗಾಲ
ತಿನ್ನಲು ಏನಿಲ್ಲ

ಎಳೆ ಬಾಳೆ ದಿಂಡು ಜಗಿಯುತ್ತ ಕೂತರು
ಅಡ್ಡಕಸಬಿ ನಾಲ್ಕು ಜನ
ಕುಟ್ಟೆ ಹಿಡಿದ ಬೈನೆ ದಿಮ್ಮಿಯ ಹೊಟ್ಟೆ
ಕೆರೆದರು ಹಗಲೂ ರಾತ್ರಿ
ಒಳಗಿನ ಹಿಟ್ಟು ತಟ್ಟಿ
ತಿಂದರು ನೆಲನೆಲ್ಲಿ ಬೆರೆಸಿ ರೊಟ್ಟಿ ಮಾಡಿ

ನಶೆಯೇರಿ ರಸ ಉಗುಳುತ್ತ
ರಸ್ತೆ ಪೂರ ಕೋಲಲ್ಲಿ ಕಾಟು ಹಾಕುತ್ತ
ಕಲ್ಲು ಹೆಕ್ಕಿ ದುಡ್ಡು ದುಡ್ಡು ಎಂದು
ಬೊಕ್ಕಣ ತುಂಬಿದರು
ಹರಕೆ ಹೊತ್ತು ತಿರುಗುವ ಹೆಂಗಸರಿಗೆಲ್ಲ
ತಂಬುರಾನೇ ಎನ್ನುತ್ತ ಬೆನ್ನುಬಿದ್ದರು
ನಕ್ಕರು ಪಕಪಕನೆ
ಕೇಳಿಸದಂತಿದ್ದರು ಎಲ್ಲರು

ಎಸೆದ ಕೂರಂಬುಗಳನ್ನೂ ಎದೆಗೊತ್ತಿ
ಸಂತೈಸುವವರ ಕಣ್ಣಲ್ಲಿ ಯಾಕಿಂಥ ನೀರು?
ಬಾಯಿತೆರೆದ ನೆತ್ತಿಗೊಂದು
ಬಾಗಿಲು ಬಂದರೂ ಗಿಟ್ಟಲಿಲ್ಲ ಏನೂ
ಪಕ್ಕೆ ಮುರಿಸಿಕೊಂಡು ಕುಸಿದ ಗುಡ್ಡದ ಕೆಳಗೆ
ಆರಿ ಹೋದ ಬಾಳು
ಬರಿ ಋಣದ ಹೂವು
ಈ ನಿಲಾವು
ಚಿವುಟಿದರೆ
ಮುಳ್ಳು ಮುಳ್ಳಿನಲ್ಲೂ ಕಳ್ಳೀ ಹಾಲು

ಮಸಣದಲ್ಲಿ ಎಸೆದ ಚಟ್ಟಗಳನ್ನೂ ತಂದು
ಒಲೆಗೆ ಒಟ್ಟಿದ್ದಾಯಿತು
ಸೆರಗಿನಲ್ಲಿ ಗಂಟು ಕಟ್ಟಿ ಇಟ್ಟಿದ್ದ ಒಂದಾಣೆಯನ್ನು
ಬಿಡಿಸಿ
ದೇವೀ ಕಾಪಾಡೆಂದು ಕಾಲಡಿಗೆ ಇಟ್ಟಿದ್ದಾಯಿತು
ಮಾತಾಡದೆ ಹಿಡಿಯಲು ಕೂತರೂ ಸಿಗಲಿಲ್ಲ
ಒಂದೂ ಮೀನು
ಮತ್ತಿನ್ನೇನು ಮಾಡುವುದು
ಮುಳುಗುವುದು, ಸತ್ತು ಮುಗಿಯುವ
ಸುಖಕ್ಕೆ ಕಾಯುವುದು

ಹೀಗಿರುವಾಗ ಹುಟ್ಟಿದ ಕವಿತೆಯನ್ನೆಲ್ಲ
ಕೊಂದು ತೆಳ್ಳಗೆ ಸಿಗಿದು ಉಪ್ಪುಹಾಕಿ
ಬಿಸಿಲಲ್ಲಿ ಒಣಗಿಸುತ್ತಿದ್ದೇನೆ ನಾನು
ಕೈಲೊಂದು ಬಾರೀಕು ಕೋಲು
ಹಾ..ಹೋ.. ಎಂದು ಹಾರಿಸಬೇಕು
ಮತ್ತೆರಡು ಬಡಿಯಬೇಕು
ಎಂದರೂ
ಸಿಗಲಿಲ್ಲ ಒಂದೂ ಕಾಗೆ ಗೂಗೆಯ ಗೂನು
ಇರು ಬಂದೆ ಎಂದು ಒಳಹೋದರೆ
ಕುದಿಸಲಿಟ್ಟ ನೀರಿನಲ್ಲಿ
ತೇಲಿತೇ ಕತ್ತರಿಸಿ ಹೋದ ಹುಡುಗನ
ಕನಸ ಕೈ ಕಾಲು..?

